# ಕುಮಾರನ ಬಾಪ್ತಿಸ್ಮ

## ಎಡ್ಡಿ ಕ್ಲೊಯೆರ್

ಬಾಪ್ತಿಸ್ಮವು ಹೊಸ ಒಡಂಬಡಿಕೆಯ ನಿರ್ದಿಷ್ಟವಾದ ಆಚರಣೆಯಾಗಿದೆ.[1] ಯೋಹಾನನಿಂದ ಆಚರಿಸಲ್ಪಟ್ಟ ಬಾಪ್ತಿಸ್ಮವು ಯೆಹೂದ್ಯರಿಗಾಗಿ ಮತ್ತು ಮಾನಸಾಂತರ ಪಟ್ಟು ಪಾಪಗಳ ನಿವಾರಣೆಗಾಗಿ ಸ್ವೀಕರಿಸುವುದಕ್ಕಾಗಿ ಕರೆಯಾಗಿತ್ತು. ಯೇಸುವಿನ ಬಾಪ್ತಿಸ್ಮವು ಆತನ ಜನನದಂತೆ ಅಪರೂಪದ್ದಾಗಿತ್ತು. ಅದು ರೂಢಿಗಿಂತ ಭಿನ್ನವಾಗಿತ್ತು.

ಯೇಸು ಮೂವತ್ತು ವರ್ಷ ಪ್ರಾಯದವನಾದಾಗ (ಲೂಕ 3:23)[2] ಸುಮಾರು ಅರವತ್ತು ಮೈಲು (ನಜರೇತಿನಿಂದ; ಮಾರ್ಕ 1:9) ಬೇಥಾನಿಗೆ (ಯೋಹಾನ 1:28)[3] ಯೋಹಾನನಿಂದ ಬಾಪ್ತಿಸ್ಮ ಹೊಂದಲು ಪ್ರಯಾಣ ಮಾಡಿದನು.[4] ಯೋಹಾನನನ್ನು ಕೇಳಲಿಕ್ಕೆ ಮತ್ತು ಅವನಿಂದ ಬಾಪ್ತಿಸ್ಮ ಹೊಂದಲಿಕ್ಕೆ ಬರುತ್ತಿದ್ದ ಸಾವಿರಾರು ಜನರೊಂದಿಗೆ ಕೂಡಿಕೊಂಡನು. ಬಹುಶಃ ಜನರು ಯೋಹಾನನ ಬಾಪ್ತಿಸ್ಮ ಹೊಂದಲು ಸಾಲಾಗಿ ನಿಂತುಕೊಂಡಿದ್ದಿರ ಬಹುದು. ಯೋಹಾನನು ನೋಡಿದಾಗ ಅನಂತರದಲ್ಲಿ ತನ್ನ ಬಳಿಗೆ ಬರುತ್ತಿದ್ದ ಯೇಸುವನ್ನು ಕಂಡನು. ಅವನು ಆಶ್ಚರ್ಯಚಕಿತನಾಗಿ ಹಿಂಜರಿದನು. ಅವನು ಆತನಿಗೆ ಬಾಪ್ತಿಸ್ಮ ಮಾಡಿಸಿದನು. ಆತನ ಬಾಪ್ತಿಸ್ಮದ ದೃಶ್ಯವು ದೇವತ್ವವನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ: ದೇವರು ಪರಲೋಕದಿಂದ ಮಾತಾಡಿದನು, ಯೇಸುವು ಬಾಪ್ತಿಸ್ಮ ಹೊಂದಿದನು ಹಾಗೂ ಆತ್ಮನು ಪಾರಿವಾಳದ ರೂಪದಲ್ಲಿ ಇಳಿದು ಬಂದನು.

ಯೇಸುವಿನ ಬಾಪ್ತಿಸ್ಮದ ಮೂರು ವಿವರಗಳನ್ನು ಆತ್ಮನು ನಮಗೆ ಕೊಟ್ಟಿದ್ದಾನೆ. ಮತ್ತಾಯನ ವಿವರಣೆಯು ಹೆಚ್ಚು ಪೂರ್ಣವಾಗಿದೆ:

> ಆ ಕಾಲದಲ್ಲಿ ಯೇಸು ಯೋಹಾನನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ್ ಹೊಳೆಗೆ ಬಂದನು. ಆಗ ಯೋಹಾನನು "ನಾನು ನಿನ್ನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು" ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ, "ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ" ಎಂದು ಹೇಳಿದಾಗ ಅವನು ಒಪ್ಪಿಕೊಂಡನು. ಯೇಸು ಬಾಪ್ತಿಸ್ಮ ಮಾಡಿಸಿಕೊಂಡ ಕೂಡಲೇ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ, "ಈತನು ನನ್ನ ಪ್ರಿಯ ಕುಮಾರನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು" (ಮತ್ತಾಯ 3:13-17; ಹೋಲಿಸು ಮಾರ್ಕ 1:9-11; ಲೂಕ 3:21, 22).

ಈ ಬಾಪ್ತಿಸ್ಮವು ಯೇಸುವಿನ ಬಹಿರಂಗ ಸೇವೆಗೆ ಸುಂದರವಾದ ಮುನ್ನುಡಿಯನ್ನು ರೂಪಿಸಿದ ನಾಲ್ಕು ವಿಶೇಷವಾದ ಘಟನೆಗಳಲ್ಲಿ ಮೊದಲನೆಯದಾಗಿದೆ. ಯೇಸುವು ಬಾಪ್ತಿಸ್ಮ ಹೊಂದಿದಾಗ, ಸುಮಾರು ಹದಿನೆಂಟು ವರ್ಷಗಳ ಮೌನವು ಮುರಿಯಲ್ಪಟ್ಟಿತು. ಎರಡನೆಯದು, ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು

ಬಂದನು (ಮತ್ತಾಯ 3:16). ಇದು ಅಳತೆಯಿಲ್ಲದೇ ಯೇಸುವು ಪರಿಶುದ್ಧಾತ್ಮನನ್ನು ಸ್ವೀಕರಿಸಿದ ಸಮಯವಾಗಿತ್ತು (ಲೂಕ 3:22; 4:1; 1:15). ಮೂರನೆಯದು, ಯೇಸುವು ತನ್ನ ತಂದೆಯಿಂದ ಸ್ವೀಕರಿಸಲ್ಪಟ್ಟನು (ಮತ್ತಾಯ 3:17). ಯೇಸುವು ತನ್ನ ಕುಮಾರನಾಗಿದ್ದಾನೆ. ಆತನೊಂದಿಗೆ ತಾನು ಮೆಚ್ಚಿಕೊಂಡಿದ್ದೇನೆ ಎಂದು ತಂದೆಯು ಹೇಳಿದನು. ನಾಲ್ಕನೆಯದು, ಅಡವಿಯೊಳಗೆ ಯೇಸುವು ಸೈತಾನನಿಂದ ಶೋಧಿಸಲ್ಪಟ್ಟನು (ಮತ್ತಾಯ 4:1-11). J. W. McGarvey ಹೀಗೆ ಬರೆದಿದ್ದಾರೆ, "ಶೋಧಿಸಲ್ಪಡುವುದು ಆತನಿಗೆ ಅಗತ್ಯವಾಗಿತ್ತು. ಅದರ ಬಲ ಮತ್ತು ಪಾಪರಹಿತತೆಯೊಂದಿಗೆ ತನ್ನ ಸ್ವಭಾವವನ್ನು ಹಂಚಿಕೊಳ್ಳಲು ನಮ್ಮನ್ನು ತರುವಂತೆ ಬಲಹೀನತೆ, ಶೋಧನೆಯೊಂದಿಗಿನ ನಮ್ಮ ಸ್ವಭಾವವನ್ನು ಹಂಚಿಕೊಂಡನು."[5]

ಯೋಹಾನನು ಮೆಸ್ಸೀಯನಿಗಾಗಿ ಮಾರ್ಗ ಸಿದ್ಧ ಪಡಿಸಲು ಕಳುಹಿಸಲ್ಪಟ್ಟ ದೇವರ ಪ್ರವಾದಿಯಾಗಿದ್ದನು. ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿ ಸಂಬಂಧಿಸುವ ಕೊಂಡಿಯಾಗಿ ಅವನಿಗೆ ಎರಡು ರೀತಿಯ ಸೇವೆಗಳಿದ್ದವು: (1) ಬರಲಿಕ್ಕಿದ್ದ ಕ್ರಿಸ್ತನಿಗಾಗಿಯೂ ಆತನ ರಾಜ್ಯಕ್ಕಾಗಿಯೂ ಜನರನ್ನು (ಯೆಹೂದ್ಯರನ್ನು) ಸಿದ್ಧಪಡಿಸುವುದು ಮತ್ತು (2) ಮೆಸ್ಸೀಯನನ್ನು ಗುರುತಿಸುವುದು (ಯೋಹಾನ 1:23, 31-34).

## ಯೋಹಾನನ ಬಾಪ್ತಿಸ್ಮವು ಏನಾಗಿತ್ತು?

ಯೋಹಾನನ ಬಾಪ್ತಿಸ್ಮವು ನಿರೀಕ್ಷೆಯ ಬಾಪ್ತಿಸ್ಮವಾಗಿತ್ತು. ಅದು ಯೇಸುವಿನ ಬರೋಣಕ್ಕಾಗಿ ಮುನ್ನೋಡಿತು (ಅಪೊಸ್ತಲರ ಕೃತ್ಯ 19:4). ಯೋಹಾನನಿಂದ ಬಾಪ್ತಿಸ್ಮ ಹೊಂದಿದವರು ಕ್ರಿಸ್ತನು ಬಂದಾಗ ಆತನನ್ನು ಸ್ವೀಕರಿಸುವೆವೆಂದು ವಾಗ್ದಾನ ಮಾಡಿದರು. ಯೋಹಾನನು ತನಗಾಗಿ ಶಿಷ್ಯರನ್ನು ಮಾಡಿಕೊಳ್ಳುತ್ತಿರಲಿಲ್ಲ, ಆದರೆ ಮೆಸ್ಸೀಯನಿಗಾಗಿ ಮಾಡುತ್ತಿದ್ದನು (ಮತ್ತಾಯ 3:11).

ಯೋಹಾನನ ಬಾಪ್ತಿಸ್ಮವು ಮಾನಸಾಂತರದ ಬಾಪ್ತಿಸ್ಮವೂ ಆಗಿತ್ತು (ಅಪೊಸ್ತಲರ ಕೃತ್ಯ 19:4). ಅವನ ಬಾಪ್ತಿಸ್ಮದ ಸಾಮಾನ್ಯ ಉದ್ದೇಶವು ಜನರನ್ನು ಮಾನಸಾಂತರಕ್ಕೆ ತರುವುದಾಗಿತ್ತು. ಜನರ ಹೃದಯಗಳನ್ನು ನೀತಿಗೆ ತಿರುಗಿಸುವದರಿಂದ ಕರ್ತನಿಗಾಗಿ ಮಾರ್ಗವನ್ನು ಯೋಹಾನನು ಸಿದ್ಧಪಡಿಸಿದನು. ಇದು ಹೊಸ ರೀತಿಯ ಮಾನಸಾಂತರವಾಗಿತ್ತು. ಇದಕ್ಕೆ ಮುಂಚಿತವಾಗಿ, ಮಾನಸಾಂತರವು ಭೂಲೋಕದ ಆಶೀರ್ವಾದಗಳಿಂದ ಪ್ರೇರೇಪಿಸಲ್ಪಡುತ್ತಿತ್ತು; ಯೋಹಾನನು ಪ್ರಸಂಗಿಸಿದ ಮಾನಸಾಂತರವು ಬರಲಿಕ್ಕಿದ್ದ ಮೆಸ್ಸೀಯನ ಹಾಗೂ ಆತನ ರಾಜ್ಯದ ಬರುವಿಕೆಯ ದೃಷ್ಟಿಕೋನದಲ್ಲಿ ಮಾನಸಾಂತರಕ್ಕೆ ಜನರನ್ನು ಕರೆಯಿತು.

ಮುಂದೆ, ಇದು ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮವಾಗಿತ್ತು (ಮಾರ್ಕ 1:4). ಈ ಬಾಪ್ತಿಸ್ಮವು ಪಾಪಗಳ ಪರಿಹಾರಕ್ಕೆ ನೀರಿನ ಬಾಪ್ತಿಸ್ಮವಾಗಿತ್ತು - ಇದೊಂದೇ ರೀತಿಯ ಬಾಪ್ತಿಸ್ಮವು ಹೊಸ ಒಡಂಬಡಿಕೆಯಲ್ಲಿ ಆಜ್ಞಾಪಿಸಲ್ಪಟ್ಟಿದೆ. ಯೇಸುವಿನ ರಕ್ತವು ಹಿಂದಕ್ಕೆ ಹಾಗೆಯೇ ಮುಂದಕ್ಕೆ ತಲುಪಿತು.

ಯೋಹಾನನ ಬಾಪ್ತಿಸ್ಮವು ವಿಧೇಯತೆಯ ಬಾಪ್ತಿಸ್ಮವೂ ಆಗಿತ್ತು (ಲೂಕ 7:30). ಯೋಹಾನನ ಬಾಪ್ತಿಸ್ಮವು ತಿರಸ್ಕರಿಸಲ್ಪಟ್ಟಾಗ, ದೇವರ ಆಲೋಚನೆಯೂ ತಿರಸ್ಕರಿಸಲ್ಪಟ್ಟಿತು, ಅವನ ಬಾಪ್ತಿಸ್ಮವು ದೇವರ ನೀತಿಯ ಭಾಗವಾಗಿತ್ತು.

# ಯೇಸುವು ಯಾಕೆ ಯೋಹಾನನ ಬಾಪ್ತಿಸ್ಮ ಮಾಡಿಸಿಕೊಂಡನು?

**ಸಕಾರಾತ್ಮಕ ದೃಷ್ಟಿಕೋನ**

ಯಾಕೆ ಯೇಸುವು ಬಾಪ್ತಿಸ್ಮ ಹೊಂದಿದನು ಎಂಬುದಕ್ಕೆ ಕಾರಣಗಳನ್ನು ಹುಡುಕುವಂತೆ, ಮೊದಲು ನಕಾರಾತ್ಮಕ ಭಾಗದ ಕಡೆಗೆ ನೋಡೋಣ. ಯೇಸುವಿಗೆ ಮಾನಸಾಂತರದ ಅಗತ್ಯತೆಯಿರಲಿಲ್ಲ. ತನ್ನ ಭೂಲೋಕದ ಇಡೀ ಜೀವನದಲ್ಲಿ ಆತನು ಪಾಪರಹಿತನಾಗಿದ್ದನು. "ಯಾಕಂದರೆ ನಮಗಿರುವ ಮಹಾ ಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ" ಎಂದು ಇಬ್ರಿಯ 4:15 ಹೇಳುತ್ತದೆ. ಆತನು ಪರಿಪೂರ್ಣವಾಗಿ ನೀತಿವಂತನಾಗಿದ್ದನು ಹಾಗೂ ಹೆಚ್ಚು ನೀತಿವಂತನಾಗಿರಬೇಕಾಗಿರಲಿಲ್ಲ.

ಎರಡನೆಯದು, ಯೇಸುವಿಗೆ ಪಾಪಗಳ ಪರಿಹಾರದ ಅವಶ್ಯಕತೆಯಿರಲಿಲ್ಲ. "ಪಾಪಗಳ ಪರಿಹಾರವು" ಪಾಪದ ಅಪರಾದವನ್ನು ಅನ್ವಯಿಸುತ್ತದೆ. ಎಂದಿಗೂ ಪಾಪಮಾಡದೇ, ಯೇಸುವಿಗೆ ತೆಗೆದು ಹಾಕಲು ಯಾವ ಅಪರಾಧವಿರಲಿಲ್ಲ.

ಮೂರನೆಯದು, ಯಾಜಕತ್ವದ ಹುದ್ದೆಗೆ ಪ್ರತಿಷ್ಠಿಸಲಿಕ್ಕೆ ಆತನು ಅದನ್ನು ಮಾಡಲಿಲ್ಲ. ಭೂಲೋಕದಲ್ಲಿದ್ದಾಗ ಆತನು ಯಾಜಕನಾಗಿರಲಿಲ್ಲ. ಆತನ ವಿಷಯದಲ್ಲಿ ದೇವರು ವಿನಾಯಿತಿ ಮಾಡಿದನು ಮತ್ತು ಆತನನ್ನು ಪರಲೋಕದಲ್ಲಿ ನಮ್ಮ ಮಹಾ ಯಾಜಕನನ್ನಾಗಿ ಮಾಡಿದನು.

ನಾಲ್ಕನೆಯದು, ಆತನ ಮೇಲೆ ದೈವತ್ವವು ಬರಬೇಕೆಂದು ಆತನು ಅದನ್ನು ಮಾಡಲಿಲ್ಲ. ಆತನು ಪಾರಂಭದಿಂದ ದೈವಿಕನಾಗಿದ್ದನು (ಮತ್ತಾಯ 1:23). ಆತನ ಬಾಪ್ತಿಸ್ಮವು ಆತನನ್ನು ದೈವಿಕನನ್ನಾಗಿ ಮಾಡಲಿಲ್ಲ.

**ಸಕಾರಾತ್ಮಕ ದೃಷ್ಟಿಕೋನ**

ಸಕಾರಾತ್ಮಕ ದೃಷ್ಟಿಕೋನದಿಂದ ಯೇಸುವಿನ ಬಾಪ್ತಿಸ್ಮದ ಕಡೆಗೆ ನೋಡೋಣ. ಯೇಸುವು ತಾನು ಯೋಹಾನನಿಂದ ಯಾಕೆ ಬಾಪ್ತಿಸ್ಮ ಹೊಂದಿದನೆಂಬುದನ್ನು ಸ್ಪಷ್ಟವಾಗಿ ಹೇಳಿದನು. "ಎಲ್ಲಾ ಧರ್ಮವನ್ನು ನೆರವೇರಿಸುವದಕ್ಕಾಗಿ" ಆತನು ಬಾಪ್ತಿಸ್ಮ ಹೊಂದಿದನು (ಮತ್ತಾಯ 3:15). ಆತನ ಬಾಪ್ತಿಸ್ಮವು ನೆರವೇರಿಕೆಯಾಗಿತ್ತು. ಯೋಹಾನನಿಂದ ಬಾಪ್ತಿಸ್ಮ ಹೊಂದುವುದು ದೇವರ ನೀತಿಯನ್ನು ನೆರವೇರಿಸುವುದು. ನೀತಿಯು ದೇವರ ಎಲ್ಲಾ ಆಜ್ಞೆಗಳನ್ನು ಅನುಸರಿಸಿ ನಡೆಯುವುದಕ್ಕೆ ಸಮನಾಗಿ ಇಡಲ್ಪಟ್ಟಿದೆ. "ನಿನ್ನ ಆಜ್ಞೆಗಳೆಲ್ಲಾ ನೀತಿಯೇ" (ಕೀರ್ತನೆ 119:172) ಎಂದು, "ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನು ನೇಮ ನಿಷ್ಠೆಗಳನ್ನು ಕೈಕೊಂಡು ತಪ್ಪಿಲ್ಲದೆ ನಡೆದುಕೊಳ್ಳುತ್ತ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು" (ಲೂಕ 1:6) ಎಂದು ಓದುತ್ತೇವೆ. ಅನಂತರದಲ್ಲಿ ಯೇಸುವು "ಬಾಪ್ತಿಸ್ಮ ಮಾಡಿಸುವ ಅಧಿಕಾರವು ಯೋಹಾನನಿಗೆ ಎಲ್ಲಿಂದ ಬಂತು? ಪರಲೋಕದಿಂದಲೋ ಮನುಷ್ಯರಿಂದಲೋ?" ಎಂದು ಹೇಳಿದನು (ಮತ್ತಾಯ 21:25). ಆತನು ಯೋಹಾನನ ಬಾಪ್ತಿಸ್ಮ ಮಾಡಿಸಿಕೊಳ್ಳುವುದು ದೇವರ ಚಿತ್ತವಾಗಿತ್ತು (ಯೋಹಾನ 6:38). ಆದುದರಿಂದ ಆತನು ಯೋಹಾನನ ಬಾಪ್ತಿಸ್ಮಕ್ಕೆ ಒಪ್ಪಿಕೊಳ್ಳುವದರಲ್ಲಿ, ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು.

ತನ್ನ ಬಾಪ್ತಿಸ್ಮದ ಬಗ್ಗೆ ಯೇಸುವಿನಿಂದ ಕೊಡಲ್ಪಟ್ಟ ಕಾರಣವು ಕೇವಲ

ವಿಶೇಷವಾದದ್ದು ಸುವಾರ್ತೆಗಳಲ್ಲಿ ಕಂಡು ಬರುತ್ತದೆ. ಆತನ ಬಾಪ್ತಿಸ್ಮಕ್ಕೆ ಹಲವಾರು ಸ್ಪಷ್ಟವಾದ ಅನ್ವಯಗಳಿರುತ್ತವೆ. ಮೊದಲನೆಯದು ಅದು ದೃಢೀಕರಿಸುವದನ್ನು ಅನ್ವಯಿಸುತ್ತದೆ. ಆತನ ಬಾಪ್ತಿಸ್ಮವು ದೇವರ ಪ್ರವಾದಿಯಾಗಿದ್ದ ಯೋಹಾನನ ಸಂದೇಶ ವನ್ನು ಮತ್ತು ಕಾರ್ಯವನ್ನು ಒಪ್ಪಿಕೊಂಡಿತು. ಯೋಹಾನನಿಂದ ಯೇಸುವಿನ ಬಾಪ್ತಿಸ್ಮವು ಯೋಹಾನನ ಬಾಪ್ತಿಸ್ಮದ ಮೂಲದ ಬಗ್ಗೆ ಕೆಲವನ್ನು ಹೇಳಿತು. ಅದು ದೇವರದಾಗಿತ್ತು. ಅದು ಯೋಹಾನನ ಬಾಪ್ತಿಸ್ಮದ ಹಾಗೂ ಉದ್ದೇಶದ ಬಗ್ಗೆ ಕೆಲವೊಂದನ್ನು ಹೇಳಿತು. ಆತನ ಬಾಪ್ತಿಸ್ಮವು ಕ್ರಿಸ್ತನ ಬಹಿರಂಗ ಸೇವೆಯ ಮುಂದಿನ ಯುಗಕ್ಕಾಗಿ ದೇವರ ಯೋಜನೆಯ ಭಾಗವಾಗಿತ್ತು.

ಎರಡನೆಯದಾಗಿ, ಯೋಹಾನನ ಬಾಪ್ತಿಸ್ಮವು ಪ್ರಾರಂಭವನ್ನು ಅನ್ವಯಿಸುತ್ತದೆ. ತನ್ನ ಬಾಪ್ತಿಸ್ಮದಲ್ಲಿ ಯೇಸುವು ಮೆಸ್ಸೀಯನೆಂದು ಸ್ವೀಕರಿಸಲ್ಪಟ್ಟನು. ಆತನ ಬಾಪ್ತಿಸ್ಮವಾದ ಕೂಡಲೇ ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು. ಈ ಸಮಯದಿಂದ ಮುಂದೆ ಆತನನ್ನು ಯೋಹಾನನು ಮೆಸ್ಸೀಯನೆಂದು ಬೇರ್ಪಡಿಸಿದನು (ಯೋಹಾನ 1:32-34; 1:35, 36). ಆತನ ಬಾಪ್ತಿಸ್ಮದಲ್ಲಿ ಯೇಸುವು ತನ್ನ ತಂದೆಯಿಂದ ಅರಿಕೆ ಮಾಡಲ್ಪಟ್ಟನು. ನಜರೇತಿನಲ್ಲಿಯ ಆತನ ಮೌನ ಜೀವಿತವು ಹಿಂದೆ ಬಿಡಲ್ಪಟ್ಟಿತು. ಆತನ ಬಾಪ್ತಿಸ್ಮವಾದ ಕೂಡಲೇ ಯೇಸುವು ಶೋಧಿಸಲ್ಪಡಲು ಅರಣ್ಯದೊಳಗೆ ನಡಿಸಲ್ಪಟ್ಟನು. ಹಾಗೂ ಶೋಧನೆಗಳ ನಂತರ ಆತನು ತನ್ನ ಬಹಿರಂಗ ಸೇವೆಯೊಳಗೆ ಹೊರಟು ಹೋದನು.

## ಯೇಸುವಿನ ಬಾಪ್ತಿಸ್ಮದಿಂದ ನಾವು ಏನು ಪಾಠಗಳನ್ನು ಕಲಿತು ಕೊಳ್ಳುವೆವು?

ಯೇಸುವಿನ ಬಾಪ್ತಿಸ್ಮವು ನಾವು ಯೋಹಾನನ ಬಾಪ್ತಿಸ್ಮ ಪಡೆಯ ಬೇಕೆಂದು ಬೋಧಿ ಸುವದಿಲ್ಲ. "ಯೇಸುವಿನ ಹಾಗೆಯೇ ನಾವು ಬಾಪ್ತಿಸ್ಮ ಹೊಂದಲಿಕ್ಕೆ ಬಯಸುತ್ತೇವೆ" ಎಂದು ಅನೇಕರು ಹೇಳಿದ್ದಾರೆ. ಯೇಸುವಿನ ಹಾಗೆ ಬಾಪ್ತಿಸ್ಮ ಹೊಂದುವುದು ಅಸಾಧ್ಯವಾ ಗಿದೆ. ಯೋಹಾನನ ಬಾಪ್ತಿಸ್ಮವು ಪ್ರತ್ಯೇಕವಾದ ಅವಧಿಗೆ, ಪ್ರತ್ಯೇಕವಾದ ಜನರಿಗಾಗಿ ಇತ್ತು. ಅವನ ಬಾಪ್ತಿಸ್ಮಕ್ಕೆ ಈಗ ಬೆಲೆಯಿರುವದಿಲ್ಲ (ಅಪೊಸ್ತಲರ ಕೃತ್ಯ 19:1-5). ಪಾಪರಹಿತನಾದ ಯೇಸುವು ಎಲ್ಲಾ ನೀತಿಯನ್ನು ನೆರವೇರಿಸುವದಕ್ಕಾಗಿ ಬಾಪ್ತಿಸ್ಮ ಹೊಂದಿದನು. ಯೇಸುವು ಧರ್ಮಶಾಸ್ತ್ರದ ಅಧೀನತೆಯಲ್ಲಿ ಜೀವಿಸಿದ್ದರಿಂದ ಆತನು ಧರ್ಮಶಾಸ್ತ್ರಕ್ಕೆ ಅಧೀನನಾಗಿದ್ದನು. ದೇವರಿಗೆ ವಿಧೇಯನಾಗಿರಲು, ಆತನು ಧರ್ಮಶಾಸ್ತ್ರಕ್ಕೆ ವಿಧೇಯನಾಗಬೇಕಾಗಿತ್ತು. ಇಂದು ಧರ್ಮಶಾಸ್ತ್ರಕ್ಕೆ ವಿಧೇಯರಾಗುವುದು ದೇವರ ಚಿತ್ತವಲ್ಲ, ಇಂದು ನಾವು ಯೋಹಾನನ ಬಾಪ್ತಿಸ್ಮವನ್ನು ಹೊಂದಲಿಕ್ಕಾಗುವದಿಲ್ಲ ಆದರೆ ಯೇಸು ಮಾಡಿದ ಅದೇ ಕಾರಣಕ್ಕಾಗಿ ನಾವು ದೇವರಿಗೆ ವಿಧೇಯರಾಗಬಹುದು. "ಯೇಸು ತನಗಾಗಿ ಇದ್ದ ದೇವರ ಚಿತ್ತಕ್ಕೆ ವಿಧೇಯನಾದಂತೆ, ಇಂದು ನನಗಾಗಿ ದೇವರ ಚಿತ್ತವು ಏನಾಗಿರುವುದು"? ಎಂದು ಕೇಳತಕ್ಕದ್ದು.

ಆತನ ಬಾಪ್ತಿಸ್ಮವು ನಮಗೆ ವಿಧೇಯತೆಯ ಪಾಠವನ್ನು ಕಲಿಸುವುದು.[6] ಯೋಹಾನನ ಬಾಪ್ತಿಸ್ಮವನ್ನು ಆತನು ಹೊಂದುವುದು ಆತನ ತಂದೆಯ ಚಿತ್ತವಾಗಿತ್ತು. ಅದು ತನ್ನ ತಂದೆಯ ಚಿತ್ತವಾಗಿದ್ದುದರಿಂದ ಯೇಸುವು ಯೋಹಾನನ ಬಾಪ್ತಿಸ್ಮಕ್ಕೆ ಸಂತೋಷ ದಿಂದ ಒಪ್ಪಿಕೊಂಡನು. ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಡದೆ ಇರುವವನು ತಾನು ಯೇಸುವಿನ ಉದಾಹರಣೆಯನ್ನು ಅನುಸರಿಸುತ್ತಿರುವೆನೆಂದು ಹೇಳಲಾರನು. ಭಾವನಾಪರವಶತೆಯೂ ಯಾವಾಗಲೂ ಅಧೀನತೆಯಾಗಿರುವದಿಲ್ಲ. ಮಹಾ ಆಜ್ಞೆಯ

ಬಾಪ್ತಿಸ್ಮಕ್ಕೆ ನಾವು ನಮ್ಮನ್ನು ಒಪ್ಪಿಸಿಕೊಟ್ಟಿರದಿದ್ದರೆ, ನಾವು ನಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟಿರುವದಿಲ್ಲ (ಮತ್ತಾಯ 28:19, 20).

ಯೇಸುವಿನ ಬಾಪ್ತಿಸ್ಮವು ನಮಗೆ ದೀನತೆಯ ಪಾಠ ಕಲಿಸುತ್ತದೆ. ಪಾಪವುಳ್ಳವನು ಪಾಪವಿಲ್ಲದಾತನಿಗೆ ಬಾಪ್ತಿಸ್ಮ ಮಾಡಿಸಿದನು (ಮತ್ತಾಯ 3:13-17). ದೀನತೆ ಅಂದರೆ "ನಮಗಿಂತಲೂ ಹೆಚ್ಚು ದೊಡ್ಡದಾದದ್ದರಲ್ಲಿ ನಮ್ಮನ್ನು ಕಳೆದು ಕೊಳ್ಳುವುದು." ಯೇಸುವು ತನ್ನ ಸ್ವಂತ - ಸ್ವರೂಪಕ್ಕಿಂತಲೂ ದೇವರ ಚಿತ್ತದ ಬಗ್ಗೆ ಹೆಚ್ಚು ಆಸಕ್ತಿಯುಳ್ಳವನಾಗಿದ್ದನು. ಯೇಸುವು ವಿಧೇಯತೆಯನ್ನು ಕಲಿತು ಕೊಂಡನು (ಇಬ್ರಿಯ 5:8, 9).

ಇದಲ್ಲದೆ, ಆತನ ಬಾಪ್ತಿಸ್ಮವು ವಿಧೇಯತೆಯು ದೇವರನ್ನು ಮೆಚ್ಚಿಸುತ್ತದೆ ಎಂದು ನಮಗೆ ಕಲಿಸುತ್ತದೆ. ಆತನ ಬಾಪ್ತಿಸ್ಮದನಂತರ ದೇವರು ಯೇಸುವನ್ನು ಬಹಿರಂಗ ರೀತಿಯಲ್ಲಿ ತನ್ನ ಕುಮಾರನೆಂದು ಸ್ವೀಕರಿಸಿದನು. ಆತನೊಂದಿಗೆ ತಾನು ಮೆಚ್ಚಿಕೊಂಡಿದ್ದೇನೆ ಎಂದು ಹೇಳಿದ್ದಷ್ಟೇ ಅಲ್ಲ, ಆದರೆ ಆತನನ್ನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ ಎಂದು ಹೇಳಿದನು. ನಾವು ನಮ್ಮ ತಂದೆಯನ್ನು ಹೇಗೆ ಮೆಚ್ಚಿಸುವೆವು? ವಿಧೇಯತೆಯ ಮೂಲಕ ಆತನನ್ನು ಮೆಚ್ಚಿಸುವೆನೆಂಬುದು ಸ್ಪಷ್ಟವಾದ ಉತ್ತರವಾಗಿದೆ. ಯೇಸು ಕ್ರಿಸ್ತನಿಗಾಗಿ ಸಾಕ್ಷಿಯಾಗಿ ಪರಲೋಕದೊಳಗಿಂದ ದೇವರು ಮಾತಾಡುವಂತೆ ಪರಿಶುದ್ಧ ಬರಹವು ಮೂರು ಸಲ ಪ್ರತಿನಿಧೀಕರಿಸುತ್ತದೆ: ಆತನ ಬಾಪ್ತಿಸ್ಮದ ಸಮಯದಲ್ಲಿ, ಆತನ ರೂಪಾಂತರದ ಸಮಯದಲ್ಲಿ (ಮತ್ತಾಯ 17:5) ಹಾಗೂ ಯೋಹಾನು 12:28-30ರಲ್ಲಿ.

## ಯೇಸುವಿನ ಹೆಜ್ಜೆಗಳಲ್ಲಿ ಅನುಸರಿಸುವುದು ಎಂಬುದರ ಅರ್ಥವೇನು?

ಯೇಸುವು ತಂದೆಯ ಚಿತ್ತವನ್ನು ಮಾಡಲು ಬಂದನು. ಯೇಸುವಿಗಾಗಿ ದೇವರ ಚಿತ್ತವು ಬಾಪ್ತಿಸ್ಮ, ಶೋಧನೆ ಹಾಗೂ ಶಿಲುಬೆಯು ಆಗಿತ್ತು. ನಮಗಾಗಿ ದೇವರ ಚಿತ್ತವು ಏನು ಆಗಿರುವುದು/ಅದರ ಅರ್ಥ ಮಹಾ ಆಜ್ಞೆಯ ಬಾಪ್ತಿಸ್ಮದ ಅರ್ಥವು ಒಂದು ಸಂಗತಿಗಾಗಿರುವುದು (ಮಾರ್ಕ 16:15). ದೇವರ ಚಿತ್ತವನ್ನು ಮಾಡಲು ಯೇಸುವು ನಮ್ಮನ್ನು ಆಹ್ವಾನಿಸಿದನು ಹಾಗೂ ಹೇಗೆ ಎಂದು ತೋರಿಸಿದನು. ಯೇಸುವಿನ ಹೆಜ್ಜೆ ಜಾಡಿನಲ್ಲಿ ನಡೆಯುವುದು ಅಂದರೆ ದೇವರ ಚಿತ್ತವನ್ನು ಮಾಡುವುದು. ಯೋಹಾನನ ಬಾಪ್ತಿಸ್ಮದ ಬಗ್ಗೆ ಯೇಸುವು ಅಷ್ಟು ಗಂಭೀರನಾಗಿದ್ದರೆ, ಮಹಾ ಬಾಪ್ತಿಸ್ಮದ ಬಗ್ಗೆ, ಮಹಾ ಆಜ್ಞೆಯ ಬಾಪ್ತಿಸ್ಮದ ಬಗ್ಗೆ ನಾವು ಎಷ್ಟು ಗಂಭೀರವಾಗಿರತಕ್ಕದ್ದು?[7]

---

ಟಿಪ್ಪಣಿಗಳು

[1]ಮತಾಂತರ ಹೊಂದಿದವರ ಬಾಪ್ತಿಸ್ಮವು ಯೆಹೂದ್ಯೇತರರನ್ನು ಯೆಹೂದಿ ಧರ್ಮದೊಳಗೆ ಪ್ರವೇಶಿಸುವಂತೆ ಮಾಡಿತು. ಆದರೆ ಪಾಪಗಳ ಕ್ಷಮಾಪಣೆಯೊಂದಿಗೆ ಸಂಬಂಧಿಸಿರಲಿಲ್ಲ. ಯೋಹಾನನ ಬಾಪ್ತಿಸ್ಮವು ಈಗಾಗಲೇ ಯೆಹೂದ್ಯರಾದವರೊಂದಿಗೆ ಅನ್ವಯಿಸಲ್ಪಟ್ಟಿತು ಮತ್ತು ಅವರನ್ನು ವಿಶ್ವಾಸದೊಳಗೆ ತೊಡಗಿಸಲಿಲ್ಲ, ಮತಾಂತರ ಹೊಂದಿದವನು ಸಾಕ್ಷಿಗಳ ಮುಂದೆ ತನ್ನನ್ನು ನೀರಿನಲ್ಲಿ ಮುಳುಗಿಸಿಕೊಳ್ಳುತ್ತಿದ್ದನು; ಯೋಹಾನನ ಬಾಪ್ತಿಸ್ಮವು ಬಾಪ್ತಿಸ್ಮ ಮಾಡಿಸುವವನ ಅವಶ್ಯಕತೆಯನ್ನು ಒಳಗೊಂಡಿತ್ತು. ಮತಾಂತರ ಹೊಂದಿದವರ ಬಾಪ್ತಿಸ್ಮವು ಹಳೇ ಒಡಂಬಡಿಕೆಗೆ ಅಪರಿಚಿತವಾದದ್ದಾಗಿತ್ತು. ಅದು ಯೋಹಾನನ ದಿನಗಳ ಸಮಯದಷ್ಟು ಮೊದಲಿನಿಂದ ಆಚರಿಸಲಾಗುತ್ತಿತ್ತು ಎಂಬುದರ ಬಗ್ಗೆ ನಿಶ್ಚಿತತೆಯಿಲ್ಲ. ಆಚರಣೆಯ ಬಗ್ಗೆ ಫೈಲೋ

ಮತ್ತು ಜೋಸಿಫಸ್ ಮೌನವಾಗಿದ್ದಾರೆ. ಅದರ ಬಗೆಗಿನ ಅತೀ ಮೊದಲಿನ ಪುರಾವೆಯು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ಪತನದ ಸಮಯದ ಬಗ್ಗೆ ಶಮ್ಮಾಯ್ ಮತ್ತು ಹಿಲ್ಲೇಲ ಶಾಲೆಗಳ ಮಧ್ಯದಲ್ಲಿಯ ವಾದವಿವಾದವಾಗಿದೆ (passover 8:8). ಆ ಸಮಯದಲ್ಲಿ ಸ್ಥಿರವಾದ ಆಚರಣೆಯು ಇತ್ತೆಂದು ತೋರುತ್ತದೆ. ಆದರೆ ಅದರ ಮೂಲದ ದಿನಾಂಕವು ಅಸ್ಪಷ್ಟತೆಯಲ್ಲಿ ತುಂಬಿಕೊಂಡಿದೆ." (Jack P. Lewis, *The Gospel According to Matthew, Part 1,* Living Word Commentary, ed. Everett Ferguson [Austin, Tex: Sweet Publishing Co., 1976], 62). [2]ಒಬ್ಬನು ಬಾಪ್ತಿಸ್ಮ ಹೊಂದಲು ಮೂವತ್ತು ವರ್ಷ ಪ್ರಾಯದವರೆಗೆ ಕಾಯಬೇಕು ಎಂದು ಇದರಿಂದ ನಿಶ್ಚಯವಾಗಿಯೂ ಒಬ್ಬನು ತೀರ್ಮಾನಿಸಬಾರದು. ಯೇಸುವು ಹನ್ನೆರಡು ವರ್ಷ ಪ್ರಾಯದವನಾದಾಗ ದೇವರ ಚಿತ್ತದ ಬಗ್ಗೆ ಅನುಭವವುಳ್ಳವನಾಗಿದ್ದನು (ಲೂಕ 2:41-49). ಯೋಹಾನನು ತನ್ನ ಕಾರ್ಯವನ್ನು ಮೊದಲೇ ಪ್ರಾರಂಭಿಸಿದ್ದರೆ ಯೇಸುವು ಬೇಗನೇ ಬಾಪ್ತಿಸ್ಮ ಹೊಂದುತ್ತಿದ್ದನು. [3]RSVಯಲ್ಲಿ ಬೇಥನಿ ಇದೆ ಹಾಗೂ KJVಯಲ್ಲಿ ಬೆತಾಬಾರಾ ಎಂದಿದೆ. [4]ಹೊಸ ಒಡಂಬಡಿಕೆಯಲ್ಲಿ ಏಳು ಬಾಪ್ತಿಸ್ಮಗಳು ನಮೂದಿಸಲ್ಪಟ್ಟಿವೆ: (1) ಮೋಶೆಯ ಶಿಷ್ಯನಾಗುವದಕ್ಕೆ ಬಾಪ್ತಿಸ್ಮ (1 ಕೊರಿಂಥ 10:2); (2) ಶ್ರಮೆಯ ಬಾಪ್ತಿಸ್ಮ (ಮಾರ್ಕ 10:38, 39); (3) ಸತ್ತವರಿಗಾಗಿ ಬಾಪ್ತಿಸ್ಮ (1 ಕೊರಿಂಥ 15:29); (4) ಪರಿಶುದ್ಧಾತ್ಮನ ಬಾಪ್ತಿಸ್ಮ (ಮತ್ತಾಯ 3:11); (5) ಬೆಂಕಿಯ ಬಾಪ್ತಿಸ್ಮ (ಮತ್ತಾಯ 3:11); (6) ಯೋಹಾನನ ಬಾಪ್ತಿಸ್ಮ (ಅಪೊಸ್ತಲರ ಕೃತ್ಯ 19:3); (7) ಮಹಾ ನಿಯೋಗದ ಬಾಪ್ತಿಸ್ಮ (ಮತ್ತಾಯ 28:19, 20; ಮಾರ್ಕ 16: 15, 16). [5]J. W. McGarvey and Philip Y. Pendleton, *The Fourfold Gospel* (Cincinnati, Ohio: The Standard Publishing Foundation, n.d.), 88. [6]ನಮ್ಮ ಬಾಪ್ತಿಸ್ಮದ ಮತ್ತು ಯೇಸುವಿನ ಬಾಪ್ತಿಸ್ಮದ ಮಧ್ಯದಲ್ಲಿ ಸಮಾಂತರತೆಯನ್ನು ನೋಡಬಹುದು: (1) ಆತನು ತನ್ನ ಬಾಪ್ತಿಸ್ಮದಲ್ಲಿ ಆತ್ಮನನ್ನು ಸ್ವೀಕರಿಸಿದನು, ನಾವೂ ಸಹ ಸ್ವೀಕರಿಸಬಹುದು (ಅಪೊಸ್ತಲರ ಕೃತ್ಯ 2:38); (2) ಆತನು ತನ್ನ ಬಾಪ್ತಿಸ್ಮದ ಸಮಯದಲ್ಲಿ ಪ್ರಾರ್ಥಿಸಿದನು ಮತ್ತು ನಾವೂ ಹಾಗೆಯೇ ಪ್ರಾರ್ಥನಾ ಪೂರ್ವಕವಾಗಿ ಬಾಪ್ತಿಸ್ಮ ಹೊಂದಬಹುದು (ಅಪೊಸ್ತಲರ ಕೃತ್ಯ 22:16); (3) ಬಾಪ್ತಿಸ್ಮದ ನಂತರ ಆತನು ದೇವರ ಕುಮಾರನಂತೆ ಸ್ವೀಕರಿಸಲ್ಪಟ್ಟನು. ನಾವು ಬಾಪ್ತಿಸ್ಮದಲ್ಲಿ ದೇವರ ಮಕ್ಕಳಾಗಿ ಮಾಡಲ್ಪಡುತ್ತೇವೆ (ಗಲಾತ್ಯ 3:26, 27). [7]ಮಹಾ ನಿಯೋಗದ ಬಾಪ್ತಿಸ್ಮದ ಅವಧಿಯು ಯೋಹಾನನ ಬಾಪ್ತಿಸ್ಮದ ಅವಧಿಗಿಂತ- ಹೆಚ್ಚು ದೊಡ್ಡದಾಗಿದೆ. ಯೋಹಾನನ ಬಾಪ್ತಿಸ್ಮದ ಅವಧಿಯು ಸ್ವಲ್ಪ ಸಮಯಕ್ಕಾಗಿ ಇತ್ತು. ಯೋಹಾನನ ಬಾಪ್ತಿಸ್ಮವು ಯೋಹಾನನಿಂದ ಆಚರಿಸಲ್ಪಟ್ಟಿತು. ಮಹಾ ನಿಯೋಗದ ಬಾಪ್ತಿಸ್ಮವು ತಂದೆ, ಕುಮಾರ, ಪರಿಶುದ್ಧಾತ್ಮನ ಹೆಸರಿನಲ್ಲಿ ಆಚರಿಸಲ್ಪಡುತ್ತದೆ (ಮತ್ತಾಯ 28:19-20). ಮಹಾ ನಿಯೋಗದ ಬಾಪ್ತಿಸ್ಮವು ಏಳು "ಒಂದರುಗಳಲ್ಲಿ" ನಮೂದಿಸಲ್ಪಟ್ಟಿದೆ (ಎಫೆಸ 4:4-6), ಮತ್ತು ಯೋಹಾನನ ಬಾಪ್ತಿಸ್ಮವು ನಮೂದಿಸಲ್ಪಟ್ಟಿರುವದಿಲ್ಲ.

© 2009 Truth for Today